ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	508
ಉತ್ತರಿಸಬೇಕಾಗಿದ್ದ ದಿನಾಂಕ	:	24.09.2020
ಉತ್ತರಿಸುವ ಸಚಿವರು	:	ಮಾನ್ಯ ಕಾರ್ಮಿಕ ಹಾಗೂ ಸಕ್ಕರೆ ಸಚಿವರು

	ಪ್ರಶ್ನೆ	ಉತ್ತರ
ಅ)	ನಿರುದ್ಯೋಗಿ ಪದವೀಧರರನ್ನು ಸ್ವೈಫಂಡರಿ ಮೂಲಕ ವಿವಿಧ ಇಲಾಖೆಗಳಲ್ಲಿ 1978ರಲ್ಲಿ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ನಿರುದ್ಯೋಗಿ ಪದವೀಧರರನ್ನು ಸ್ವೈಫಂಡರಿ ಮೂಲಕ ವಿವಿಧ ಇಲಾಖೆಗಳಲ್ಲಿ 1978ರಲ್ಲಿ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	1988ರಲ್ಲಿ ಸ್ವೈಫಂಡರಿ ಪದವೀಧರರಿಗೆ 50% ಮೀಸಲಾತಿ ಕೊಡುವುದಕ್ಕೆ ತೀರ್ಮಾನಿಸಿ ಇಲಾಖೆಗೆ ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಂತಹ ನೇಮಕಾತಿಯನ್ನು ಕಾರ್ಮಿಕ ಇಲಾಖೆಯಲ್ಲಿ ಮಾಡಿಕೊಂಡಿರುವುದಿಲ್ಲ.
ಇ)	ಸ್ವೈಫಂಡರಿ ಪದವೀಧರರು 12,13 ವರ್ಷಗಳು ಮಿತ ವೇತನ ಪದವೀಧರರಾಗಿ ಸೇವೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸ್ವೈಫಂಡರಿ ಪದವೀಧರರು 12, 13 ವರ್ಷಗಳು ಮಿತ ವೇತನ ಪದವೀಧರರಾಗಿ ಇತರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಈ)	ಸ್ವೈಫಂಡರಿ ಪದವೀಧರರು ಹಾಗೂ ದಿನಗೂಲಿ ನೌಕರರ ಅರ್ಹ ಸೇವೆಯನ್ನು ನಿವೃತ್ತಿ ಪಿಂಚಣಿಗೆ ಪರಿಗಣಿಸುವ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ: 02.09.2019ರಲ್ಲಿ ತೀರ್ಪು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 02.09.2020ರಂದು ನೀಡಿದ ತೀರ್ಪಿನಲ್ಲಿ ಯಾವುದೇ ಅಡ್ಹಾಕ್ ಸೇವೆಯಲ್ಲಿನ ನೌಕರನು ಅಂತೆಯೇ ವಯೋನಿವೃತ್ತಿ ದಿನಾಂಕದವರೆಗೆ ಮುಂದುವರೆದು ಈ ಅವಧಿಯಲ್ಲಿ ಸೇವೆಯಿಂದ ಬಿಡುಗಡೆಗೊಳ್ಳದೆ ಅಥವಾ ಸೇವಾ ಸಕ್ರಮಾತಿ ಪರಿಗಣನೆಯಾಗದೆ ಇರುವ
ಉ)	ಬಂದಿದ್ದಲ್ಲಿ, ತೀರ್ಪಿನಲ್ಲಿ ಯಾವ ರೀತಿಯಲ್ಲಿ ನಿವೃತ್ತಿ ನೌಕರರ ಅರ್ಹ ಸೇವೆಯನ್ನು ಪರಿಗಣಿಸಿ ಪಿಂಚಣಿ ನೀಡಬೇಕೆಂದು ಆದೇಶಿಸಿರುತ್ತದೆ; (ವಿವರ ಒದಗಿಸುವುದು)	ಪ್ರಕರಣಗಳಲ್ಲಿ ನಿವೃತ್ತಿ ವೇತನ ಸೌಲಭ್ಯದ ಪರಿಗಣನೆಗೆ ಸಂಬಂಧಿಸಿದೆ. ಆದಾಗ್ಯೂ ಈ ತೀರ್ಪಿನಲ್ಲಿನ ಅಂಶಗಳ ಪರಿಗಣನೆಯು ಕೇವಲ ವರ್ಕ್ ಚಾರ್ಜ್ ಸಿಬ್ಬಂದಿ/ ಪಿಂಚಣಿ ರಹಿತ ಸಾದಿಲ್ವಾರು ವೆಚ್ಚದ ಸಿಬ್ಬಂದಿಗಳಿಗೆ ಸಂಬಂಧಿಸಿದೆ. ಈ ತೀರ್ಪಿನಲ್ಲಿ ಸ್ವೈಫಂಡರಿ ಪದವೀಧರರು ಹಾಗೂ ದಿನಗೂಲಿ ಮೇಲೆ ನೇಮಕ ಹೊಂದಿ ಸಕ್ರಮಗೊಂಡಿರುವ ನೌಕರರ ಪ್ರಕರಣಗಳನ್ನು ಒಳಪಡಿಸಿಲ್ಲ.

ಊ)	ಮಿತ ವೇತನದಲ್ಲಿ ನಿರ್ವಹಿಸಿರುವ ಸೇವೆಯನ್ನು ಪರಿಗಣಿಸಿ, ಪಿಂಚಣಿ ಸೌಲಭ್ಯ ನೀಡುವಂತೆ ಆದೇಶದಲ್ಲಿ ತಿಳಿಸಿದರೂ ಸಹ ಸರ್ಕಾರದಿಂದ ಯಾವುದೇ ಕ್ರಮ ಆಗದಿರುವುದಕ್ಕೆ ಕಾರಣವೇನು;	ಪ್ರಶ್ನೆ ಉದ್ಭವಿಸುವುದಿಲ್ಲ.
ಋ)	ಪ್ರಸ್ತುತ ಯಾವ ರೀತಿ ಅರ್ಹ ಸೇವೆಯನ್ನು ಪರಿಗಣಿಸಲಾಗಿದೆ; (ವಿವರ ಒದಗಿಸುವುದು)	ಮಾನ್ಯ ಸರ್ವೋಚ್ಛ ನ್ಯಾಯಾಲಯವು ಈ ಹಿಂದೆ ರಿಟ್ ಅರ್ಜಿ ಸಂಖ್ಯೆ: 1249/89ರಲ್ಲಿ ದಿನಾಂಕ: 26.08.1993ರಂದು ನೀಡಿದ ಆದೇಶದನ್ವಯ ಮಿತವೇತನ ಪದವೀಧರರಾಗಿ ಸಲ್ಲಿಸಿದ ಸೇವೆಯನ್ನು ದಿನಾಂಕ: 01.05.1991ರಿಂದ ಅನ್ವಯಿಸಿ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದ್ದು, ಈ ಮೇರೆಗೆ ಆದೇಶ ಸಂಖ್ಯೆ: ಎಸ್ ಡಬ್ಲ್ಯೂಎಲ್ 18 ಎಲ್ ಇ ಟಿ 94 ದಿನಾಂಕ: 08.01.1998ನ್ನು ಹೊರಡಿಸಲಾಗಿದೆ. ಮುಂದುವರೆದು, ಮಾನ್ಯ ನ್ಯಾಯಾಲಯಗಳ ಆದೇಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆಇ 09 ಎಸ್ ಆರ್ ಎ 2012 ದಿನಾಂಕ: 08.09.2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ಆಇ 04 ಎಸ್ ಆರ್ ಎ 2016 ದಿನಾಂಕ: 10.04.2017ರಂತೆ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಸೇವೆ ಸಲ್ಲಿಸಿ ತದನಂತರ ಸೇವೆಯಲ್ಲಿ ಕ್ರಮಬದ್ಧಗೊಳಿಸಲಾದ ಎಲ್ಲಾ ಸರ್ಕಾರಿ ನೌಕರರಿಗೆ ಕೆ.ಸಿ.ಎಸ್.ಆರ್. ನಿಯಮ 247–ಎ ರನ್ವಯ ನಿಯಮಾನುಸಾರ ಲಭ್ಯವಾಗುವ ಅಧಿಕ ಅರ್ಹತಾದಾಯಕ ಸೇವಾ ಸೌಲಭ್ಯವನ್ನು ಸಹ ವಿಸ್ತರಿಸಿ ಪರಿಗಣಿಸಲಾಗಿದೆ.
ಎ)	ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಯಾವ ಕಾಲಮಿತಿಯೊಳಗೆ ಈ ನಿವೃತ್ತಿ ನೌಕರರಿಗೆ ನ್ಯಾಯ ದೊರಕಿಸಲಾಗುವುದು?	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಎಲ್‌ಡಿ 128 ಎಲ್‌ಡಬ್ಲ್ಯೂಎ 2020

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಹಾಗೂ ಸಕ್ಕರೆ ಸಚಿವರು